(ಏ) ರಾಜ್ಯದಲ್ಲಿ ರೈತರು ಬೆಳೆದಂತ ಆಹಾರ ಧಾನ್ಯಗಳಿಗೆ ಸರ್ಕಾರ ದರ ನಿಗದಿ ಮಾಡುವುದು

ಶ್ರೀ ರೇವು ನಾಯಕ್ ಬೆಳಮಗಿ(ಕಮಲಾಪುರ):- ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ರೈತರು ಬೆಳೆದಂತಹ ಆಹಾರಧಾನ್ಯಗಳಿಗೆ ಈ ಸರ್ಕಾರ ರೇಟ್ ಫಿಕ್ಸ್ ಮಾಡಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ರೈತರಿಗೆ ತೊಂದರೆ ಬಹಳಷ್ಟು ಇರುತ್ತದೆ. ಆದರೆ ಇವತ್ತು ಸಣ್ಣ ಕೈಗಾರಿಕಾ ಸಚಿವರು ಫ್ಯಾಕ್ಟರಿ ಹಾಕುವುದಕ್ಕೆ 20 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದರು. ಆದರೆ ರೈತರು ಬೆಳೆದಂತಹ ಧಾನ್ಯಗಳಿಗೆ ಯಾವುದೇ ಬೆಳೆ ಇರಲಿ, ಅದು ಜೋಳ, ರಾಗಿ, ಕಬ್ಬು ಅದಕ್ಕೆ ರೇಟ್ ಫಿಕ್ಸ್ ಮಾಡಿ.

ಅಧ್ಯಕ್ಷರು:- ರೇವು ನಾಯಕ್‌ರವರೇ ತಾವು.

ಶ್ರೀ ರೇವು ನಾಯಕ್ ಬೆಳಮಗಿ:- ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನನಗೆ ಮಾತನಾಡುವುದಕ್ಕೆ ಬರುವುದಿಲ್ಲ. ನಾನು ಹೊಸದಾಗಿ ಬಂದಿದ್ದೇನೆ.

ಅಧ್ಯಕ್ಷರು:- ನನಗೆ ಗೊತ್ತು, ನಾನೇ ಪ್ರಾರಂಭ ಮಾಡಿಸಿದ್ದು ಮಾತನಾಡಿಸುವುದಕ್ಕೆ. ಶೂನ್ಯವೇಳೆಯಲ್ಲಿ ಬಹಳ ಆರ್ಜೆಂಟಾಗಿ ಇರತಕ್ಕಂಥ ವಿಚಾರ ಇದ್ದು, ಅದನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ತಕ್ಷಣ ಸರ್ಕಾರ ಉತ್ತರ ಕೊಡುತ್ತದೆ. ನೀವು ಈಗ ಪ್ರಸ್ತಾಪ ಮಾಡುತ್ತಿರತಕ್ಕಂಥ ವಿಚಾರ ಮೂಲಭೂತ ನೀತಿಗೆ ಸಂಬಂಧಿಸಿದ್ದು. ಅದಕ್ಕೋಸ್ಕರ ಇದು ಶೂನ್ಯ ವೇಳೆಯಲ್ಲಿ ಬೇಡ. ರಾಜ್ಯಪಾಲರ ಭಾಷಣದ ಮೇಲೆ ನಾನೇ ಅವಕಾಶ ಕೊಡುತ್ತೇನೆ. ಆಗ ತಾವು ಮಾತನಾಡಿ ಸರ್ಕಾರದ ಕಡೆಯಿಂದ ಉತ್ತರವನ್ನು ಕೊಡಿಸುತ್ತೇನೆ. ನಾನು ಬೇರೆ ಯಾವುದೋ ವಿಚಾರ ಪ್ರಾಸ್ತಾಪ ಮಾಡುತ್ತೀರಿ ಎಂದು ತಿಳಿದುಕೊಂಡೆ. ನಾನು ಸ್ವತಃ ತಮಗೆ ಅವಕಾಶ ಕೊಡಿಸುತ್ತೇನೆ.

ಶ್ರೀರೇವು ನಾಯಕ್ ಬೆಳಮಗಿ:- ಮಾನ್ಯ ಅಧ್ಯಕ್ಷರೇ, ನಾಳೆಗೆ ಅವಕಾಶ ಕೊಟ್ಟರೆ ನಿಮ್ಮ ಮಾತಿಗೆ ಗೌರವ ಇದೆ. ಆದರೆ 1994-95ನೇ ಸಾಲಿನ ಕಬ್ಬು ಬೆಳೆಗಾರರು.

ಅಧ್ಯಕ್ಷರು:- ತಾವು ಮಾತನಾಡಿ. ತಮಗೆ ನಾನು ವೇಳೆ ಕೊಡುತ್ತೇನೆ, ತಾವು ನಾಳೆ ಮಾತನಾಡಿ.

(ಐ) ಚಿಕ್ಕಪೇಟೆ ಮತ್ತು ಬಿನ್ನಿಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೆಂಪಾಪುರ ಅಗ್ರಹಾರದಲ್ಲಿ ಬಾರ್ ತೆರೆಯಲು ಅಬಕಾರಿ ಇಲಾಖೆಯವರು ಅನುಮತಿ ನೀಡಿರುವುದು.

ಶ್ರೀ ಪಿ.ಎಸ್. ಪ್ರಕಾಶ (ಚಿಕ್ಕಪೇಟೆ):- ಸನ್ಮಾನ್ಯ ಸಭಾಧ್ಯಕ್ಷರೆ, ಚಿಕ್ಕಪೇಟೆ ಮತ್ತು ಬಿನ್ನಿ ಪೇಟೆ ವಿಧಾನಸಭಾಕ್ಷೇತ್ರದಲ್ಲಿ ಕೆಂಪಾಪುರ ಅಗ್ರಹಾರ ಇಲ್ಲಿ ದಿನಾಂಕ 21.1.97.ರಂದು ಒಂದು ಬಾರನ್ನು ತೆರೆಯಲು ಅಬಕಾರಿ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ. ಅಂದು

ರಾತ್ರಿ ಸುಮಾರು ನಾಲ್ಕು ಐದು ಸಾವಿರ ಜನ ಬಾರನ್ನು ಮುಚ್ಚಿಸಬೇಕು ಎಂದು ಹೇಳಿ ಇಡೀ ಕೆಂಪಾಪುರ ಅಗ್ರಹಾರದಲ್ಲಿ ಬಂದ್ ಮಾಡಿಸಿ ದೊಡ್ಡ ಹೋರಾಟವನ್ನು ಮಾಡಿ ನಾನು ಒಂದು ಖಾಸಗಿ ಕಾರ್ಯಕ್ರಮದಲ್ಲಿ ಇದ್ದಾಗ ಅಲ್ಲಿ ಸುಮಾರು ನೂರಾಐವತ್ತರಿಂದ ಇನ್ನೂರು ಜನ ಯುವಕರು ಬಂದು ಬಾರನ್ನು ಮುಚ್ಚಿಸಬೇಕು ಎಂದು ಹೇಳಿದರು. ಆ ಸ್ಥಳಕ್ಕೆ ಭೇಟಿ ನೀಡಿದಾಗ ಐದು ಸಾವಿರ ಜನ ಯುವಕರು ಹೆಣ್ಣುಮಕ್ಕಳು ಬಾರನ್ನು ಮುಚ್ಚಿಸಬೇಕು ಎಂದು ಎಲ್ಲಾ ದೊಡ್ಡ ಗಲಾಟೆ ಮಾಡಿದರು. ಆಗ ನಾನು ಅವರಿಗೆಲ್ಲಾ ಸಮಾಧಾನ ಪಡಿಸಿ ನಾನು ಇದರ ಬಗ್ಗೆ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತೇನೆ, ಇದನ್ನ ಮುಚ್ಚಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳಿ ದಿನಾಂಕ 21ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದು ಈ ರೀತಿಯಾಗಿ ಒಂದು ಬಾರ್ ಪ್ರಾರಂಭವಾಗಿದೆ, ಇದನ್ನು ಮುಚ್ಚಿಸಬೇಕು. ಇದರಿಂದ ಸಾರ್ವಜನಿಕರಿಗೆ ಬಹಳ ಅನಾನುಕೂಲವಾಗಿದೆ. ಮತ್ತೆ ಶಾಲೆಗಳು, ದೇವಸ್ಥಾನ, ಚರ್ಚ್ ಇವೆ, ಆದುದರಿಂದ ಇದನ್ನು ಮುಚ್ಚಿಸಬೇಕು ಎಂದು ಹೇಳಿದಾಗ, ಅವರು ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಯವರು ಉಪಾಯುಕ್ತರಿಗೆ ಒಂದು ಪತ್ರವನ್ನು ಬರೆದು ಇದನ್ನು ಮುಚ್ಚಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿದರು. ಅದು ಆದನಂತರ 23ನೇ ತಾರೀಖು ನಾನು ಬೆಳಗ್ಗೆ 10-30ಕ್ಕೆ ಹೋದಾಗ ಉದ್ರಿಕ್ತ ವಾತಾವರಣ ಇತ್ತು. ಅಲ್ಲಿ ದೊಡ್ಡ ಗಲಾಟೆ ಆಗುತ್ತಾ ಇತ್ತು. ಸರಿ ನಗರಪಾಲಿಕಾ ಸದಸ್ಯರೊಬ್ಬರು ಧರಣಿ ಕುಳಿತ್ತಿದ್ದರು. ಅವರನ್ನು ಎಕ್ಸೈಜ್ ಉಪ ಆಯುಕ್ತರ ಹತ್ತಿರ ಕಳುಹಿಸಿದಾಗ ಅವರು ಮೋಹನ್‌ದಾಸ್ ನಾಯಕ್ ಎನ್ನುವವರು ನಮ್ಮನ್ನೆಲ್ಲಾ ಹೀನಾಮಾನವಾಗಿ ಬೈದು ಈ ಕರ್ನಾಟಕದಲ್ಲಿ ಮುಚ್ಚಿಸಬೇಕಾದರೆ ಬಾರ್‌ಗಳನ್ನೆಲ್ಲಾ ಮುಚ್ಚಿಸಿ ಇದೊಂದು ಇದ್ದರೆ ನಿಮಗೆ ಏನು ನಷ್ಟ ಮಾಡಿಕೊಳ್ಳಲಿ ಬಿಡಿ ಎಂದು ಹೇಳಿದ್ದಾರೆ. ಇದನ್ನು ಖಂಡಿಸಿ ಅಂದು ಮಧಾಹ್ನ ನಾನೂ ಕೂಡ ಧರಣಿ ಸತ್ಯಾಗ್ರಹ ಕುಳಿತಿದ್ದೆ. ಬಿನ್ನಿಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರೂ ಹಾಗೂ ಮಾನ್ಯಮಂತ್ರಿಗಳಾದಂಥ ಶ್ರೀಮಾನ್ ಸೋಮಣ್ಣನವರು, ಅಬಕಾರಿ ಆಯುಕ್ತರನ್ನು ಕರೆಸಿ ಮತ್ತು ಅಬಕಾರಿ ಸೂಪರಿಂಟೆಂಡೆಂಟರನ್ನು ಕರೆಸಿ ಅಲ್ಲಿ ಏನು ಪರಿಸ್ಥಿತಿ ನೋಡಿ ಎಂದು ಹೇಳಿದ್ದಾರೆ. ಅಲ್ಲಿಯ ವಾತಾವರಣವನ್ನು ನೋಡಿ ಇವತ್ತೇ ಆ ಬಾರನ್ನು ಮುಚ್ಚಿಸಲು ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳಿ ಎಕ್ಸೈಜ್ ಉಪಆಯುಕ್ತರು 23-2-96ರಲ್ಲಿ ನಮಗೆ ಒಂದು ಲಿಖಿತವಾದ ಪತ್ರವನ್ನು ಕೊಟ್ಟಿರು. ಸಂಜೆ ನಾವು ಬಾರನ್ನು ಮುಚ್ಚಿಸಿದ್ದೇವೆ, ನೀವು ಧರಣಿಯನ್ನು ಅಂತ್ಯಗೊಳಿಸಿ, ಇಲ್ಲಿ ಕೆಟ್ಟದಾದ ವಾತಾವರಣ ಇದೆ ಎಂದು ನಮಗೆ ಮೇಲುನೋಟಕ್ಕೆ ಕಂಡುಬಂದಿದೆ ಆದ್ದರಿಂದ ನೀವು ಹೋಗಬಹುದು ಎಂದು ಒಂದು ಪತ್ರವನ್ನೂ ಸಹ ನನಗೆ ಕೊಟ್ಟರು. ಅದು ಆದನಂತರ ಬಾರಿನ ಮಾಲೀಕ ನನ್ನ ಮೇಲೆ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರದ ಲೋಕಸಭಾ ಸದಸ್ಯರಾದಂಥ ಶ್ರೀಮಾನ್ ಅನಂತಕುಮಾರ್ ಅವರ ಮೇಲೆ ಕೋರ್ಟಿನಲ್ಲಿ ದಾವೆ ಹಾಕಿದ್ದಾರೆ. ದಾವೆ ಹಾಕಿ ಶಾಸಕರು ಮತ್ತು ಲೋಕಸಭಾ ಸದಸ್ಯರು ಮಾತ್ರ ಇದಕ್ಕೆ ವಿರೋಧ, ಸ್ಥಳಿಯವರು ಯಾರೂ ಇದಕ್ಕೆ ವಿರೋಧ ಇಲ್ಲ, ಆದುದರಿಂದ ನನಗೆ ಬಾರನ್ನು ತೆರೆಯುವುದಕ್ಕೆ ಅನುಮತಿ ಮಾಡಿಕೊಡಿ ಎಂದು ಹೇಳಿ ಒಂದು ದಾವೆಯನ್ನು ಕೋರ್ಟಿನಲ್ಲಿ ಹಾಕಿದರು. ಆ ದಾವೆ ನಂತರ ಕೋರ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಬೇಕೆಂದು ಕೇಳಿದಾಗ ಶ್ರೀಮಾನ್ ಮೋಹನದಾಸ ನಾಯಕ್ ಎಕ್ಸೈಜ್ ಸೂಪರಿಂಟಿಂಡೆಂಟ್ ಅವರು ದಿನಾಂಕ 7-2-97 ರಂದು ಒಂದು ಪತ್ರವನ್ನು

ಬರೆದು ಇಲ್ಲಿಯ ಸ್ಥಳೀಯರ ವಿರೋಧ ಇಲ್ಲ, ಬರೀ ಶಾಸಕರು ಮತ್ತು ಲೋಕಸಭಾ ಸದಸ್ಯರು ಮಾತ್ರ ವಿರೋಧ ಮಾಡುತ್ತಿದ್ದಾರೆ, ಆದ್ದರಿಂದ ಇದರಲ್ಲಿ ಏನೂ ತೊಂದರೆ ಇಲ್ಲಾ; ಅವರ ಹತ್ತಿರ ಸ್ವಂತ ಕಟ್ಟಡ ಇದೆ, ಆದ್ದರಿಂದ ಈ ಬಾರನ್ನು ತೆರೆಯುವುದಕ್ಕೆ ಅವಕಾಶ ಕೊಡಬಹುದು ಎಂದು ಹೇಳಿ ಅವರಿಗೆ ಒಂದು ಪತ್ರವನ್ನೂ ಸಹ ಕೊಟ್ಟಿದ್ದಾರೆ. ಇದು ಕೋರ್ಟಿನಲ್ಲಿ ಹೋದಾಗ ಇದು ಮುಂದಿನ ವಾರದೊಳಗೆ ಮತ್ತೆ ಕೋರ್ಟಿನಲ್ಲಿ ಇದರ ಬಗ್ಗೆ ಇದೆ. ಆದ್ದರಿಂದ ಈ ರೀತಿ ಕೊಟ್ಟರೆ..

ಅಧ್ಯಕ್ಷರು:- ಆ ಎಕ್ಸೈಜ್ ಸೂಪರಿಂಟಿಂಡೆಂಟರು ಬರೆದಿರುವ ಪತ್ರದ ಕಾಪಿ ಇದೆಯಾ?

ಶ್ರೀ ಪಿ.ಎಸ್. ಪ್ರಕಾಶ್:- ಇದೆ.

ಅಧ್ಯಕ್ಷರು:- ಅದನ್ನು ಕಳುಹಿಸಿ ಕೊಡಿ. ಆಯಿತು ಈಗ ಗೊತ್ತಾಯಿತು ಬಿಡಿ.

ಶ್ರೀ ವಿ. ಸೋಮಣ್ಣ:- (ಬಂಧೀಖಾನೆ ಖಾತೆ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, 23-1-1997ರಂದು ಮಧಾಹ್ನ ಸುಮಾರು ಹನ್ನೆರಡೂವರೆ ಗಂಟೆಗೆ..

ಅಧ್ಯಕ್ಷರು:- ಆ ಎಕ್ಸೈಜ್ ಸೂಪರಿಂಟಿಂಡೆಂಟ್ ಸಾರ್ವಜನಿಕರಿಂದ ಯಾವುದೂ ವಿರೋಧ ಇಲ್ಲ ಎಂದು ಬರೆದಿದ್ದಾನಂತೆ.

ಶ್ರೀ ವಿ. ಸೋಮಣ್ಣ:- ಅದೇನಾಯಿತು ಅವತ್ತು ನಾನು ಸಂಬಂಧಪಟ್ಟ ಎಕ್ಸೈಜ್ ಸೂಪರಿಂಟಿಂಡಂಟ್ ಮತ್ತು ಡಿ.ಸಿ. ಯವರನ್ನು ಕರೆಸಿ ಸ್ಪಾಟ್‌ಗೆ ಕಳುಹಿಸಿದೆ. ಅಲ್ಲಿ ಏನೋ ಉದ್ರಿಕ್ತ ವಾತಾವರಣ ಇದೆಯಂತೆ, ಹೋಗಿ ನೋಡಿಕೊಂಡು ಬನ್ನಿ ಎಂದು. ಅವರೇ ಬಂದು ಮತ್ತೆ ನನ್ನ ಕಛೇರಿಗೆ ಹೇಳಿದರು. ಸುಮಾರು 3-4ಸಾವಿರ ಜನ ಸೇರಿದ್ದಾರೆ, ಇದರಿಂದ ತೊಂದರೆ ಆಗಿದೆ, ಇದನ್ನು ನಾವು ಕೊಡುವುದಿಲ್ಲ ದಯಮಾಡಿ ಅದನ್ನು ರದ್ದು ಪಡಿಸುವುದಕ್ಕೆ ಹೇಳಿದ್ದೇವೆ ಎಂದರು. ಆಯಿತು ಆ ಶಾಸಕರಿಗೆ ಕನ್‌ವಿನ್ಸ್ ಮಾಡಿ ಎಂದು ಹೇಳಿ ಕಳುಹಿಸಿದ ಮೇಲೆ ಒಂದು ಕಾಗದವನ್ನು ತುಂದು ಕೊಟ್ಟಿದ್ದಾರೆ. ಅದು ಆದಮೇಲೆ ಮಧ್ಯದಲ್ಲಿ ಇವರು ಕೋರ್ಟಿಗೆ ಒಂದು ಅಫಿಡೆವಿಟ್ ಕೊಡಬೇಕಾದಾಗ ಅವರು ಉದ್ಧಟತನ ಮಾಡಿದ್ದಾರೆಂದು ಕಾಣುತ್ತದೆ. ಅದರ ಬಗ್ಗೆ ನೋಡಬೇಕು.

ಶ್ರೀ ಜೆ.ಎ.ಶ್ರೀರಾಮರೆಡ್ಡಿ:- ಒಬ್ಬ ಅಧಿಕಾರಿ ಕೋರ್ಟಿಗೆ ಈ ತರಹ ವರದಿಕೊಟ್ಟರೆ ಅದರ ಅರ್ಥ ಏನು ಎಂಬುದನ್ನು ನಾವು ಗ್ರಹಿಸಬೇಕಾಗುತ್ತದೆ. ಇದಕ್ಕಿಂತ ಬಹಿರಂಗವಾದಂಥ ಭ್ರಷ್ಟಾಚಾರ ಇದೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ.

MR.SPEAKER:- The concerned officer must be kept under suspension. The Government has no other option but to keep that officer under suspension forthwith.

ಶ್ರೀ ವಾಟಾಳ್ ನಾಗರಾಜ್:- ಕೂಡಲೇ ಅವರನ್ನು ವಜಾ ಮಾಡಬೇಕು ಅವನು ಹದ್ದು ಮೀರಿ ಈ ರೀತಿ ಪತ್ರ ಬರೆಯತಕ್ಕಂಥದ್ದಲ್ಲ.

ಅಧ್ಯಕ್ಷರು:- ಒಂದು ನಿಮಿಷ ದಯಮಾಡಿ ಸಹಕರಿಸಿ. ತಾವು ಎಲ್ಲರೂ ಒಟ್ಟಿಗೆ ಎದ್ದು ನಿಂತು ಹೇಳಿದರೆ ಏನೂ ಅರ್ಥವಾಗುವುದಿಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಇಷ್ಟೇ ಹೇಳಬಯಸುತ್ತೇನೆ. ಅವರು ಬೆಂಗಳೂರು ನಗರದ ಶಾಸಕರು ಅವರ ಇತಿಹಾಸವನ್ನು ಹೇಳಿದ್ದಾರೆ. ಸಚಿವ ಸಂಪುಟದ ಸದಸ್ಯರೊಬ್ಬರು ಎದ್ದು ಹೇಳುತ್ತಾರೆ, ನಾನೂ ಕೂಡ ಹೋಗಿದ್ದೆ, ಸಾವಿರಾರು ಜನರಿದ್ದರು ಅನಂತರ ನಾನೇ ಎಲ್ಲಾ ಸರಿ ಮಾಡಿದೆನೆಂದು. ಕೋರ್ಟಿಗೆ ಹೋಗತಕ್ಕದ್ದು ಆತನ ಹಕ್ಕು ಹೋಗಲಿ

ಶ್ರೀ ಎಂ. ಸಿ. ನಾಣಯ್ಯ:- ಕೋರ್ಟಿಗಲ್ಲ ಸಾರ್. ನಾನು ಪತ್ರವನ್ನು ಓದಿ ಬಿಡುತ್ತೇನೆ. ಆ ಪತ್ರವನ್ನು ನಾನು ಓದಿದ್ದೇನೆ. ಈ ಪತ್ರ ಅಬಕಾರಿ ಉಪಾಯುಕ್ತ (ಪ್ರಭಾರ) ಬೆಂಗಳೂರು ಇವರು ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ ಇವರಿಗೆ ಬರೆದಿರತಕ್ಕಂಥ ಪತ್ರ. ಆ ಪತ್ರದಲ್ಲಿ ಅವರು ಏನು ಹೇಳುತ್ತಾರೆ ಅಂದರೆ "ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ಮೂಲಕ ನಿಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಅಬಕಾರಿ ನಿರೀಕ್ಷರು ಬಿನ್ನಿಪೇಟೆ ವಲಯ ಮತ್ತು ಸಿಬ್ಬಂದಿಯವರು ಸ್ಥಳ ಪರಿಶೀಲನೆಗಾಗಿ ಹೋಗಲಾಗಿ, ದೂರು ಅರ್ಜಿ ಬಂದಿರತಕ್ಕಂಥ ನಿಯೋಜಿತ ಸ್ಥಳದಿಂದ ನೂರು ಮೀಟರ್ ಅಂತರದಲ್ಲಿ ಸುತ್ತಾಡಿ ನೋಡಲಾಗಿ ನಿಯಮ ಐದರ ಪ್ರಕಾರ ಯಾವುದೇ ವಿಧವಾದ ಆಕ್ಷೇಪಣೆಯ ಸ್ಥಳಗಳು ಇಲ್ಲದಿರುವುದು ಕಂಡುಬಂದಿದೆ. ಮತ್ತು ಸದರಿ ನಿಯೋಜಿತ ಸ್ಥಳದಿಂದ ಸುಮಾರು 80 ರಿಂದ 100 ಮೀಟರ್ ಅಂತರದಲ್ಲಿ ಒಂದು ಸೌಮ್ಯ ಬಾರ್ ಮತ್ತು ರೆಷ್ಟೋರೆಂಟ್ ಸುಮಾರು 10 ರಿಂದ 15 ವರ್ಷಗಳಿಂದ ಯಾವುದೇ ದೂರು ವಗೈರಿಗಳಿಲ್ಲದೆ ಚಾಲ್ತಿಯಲ್ಲಿರುತ್ತದೆ. ಸದರಿ, ಯೋಜಿತ ಸ್ಥಳದಲ್ಲಿ ಸ್ಥಳಾಂತರಕ್ಕೆ ಅರ್ಜಿ ಸಲ್ಲಿಸಿರುವವರ ಮೇಲೆ ಬಡಾವಣೆಯ ಕೆಲವು ವೈಯಕ್ತಿಕ ದ್ವೇಷಗಳೇ ಈ ದೂರು ಅರ್ಜಿಗೆ ಕಾರಣವೆಂದು ಮೇಲ್ನೋಟಕ್ಕೆ ಕಂಡುಬಂದಿದೆ. ನನ್ನದು ಸ್ಥಳಾಂತರಗೊಳುವುದಕ್ಕೆ ಅನುಮತಿ ಕೊಡಬಹುದೆಂದು ಅಬಕಾರಿ ನಿರೀಕ್ಷಕರು ಶಿಫಾರಸ್ಸು ಮಾಡಿರುತ್ತಾರೆ.

MR.SPEAKER:- He has directly implicated the Lok Sabha Member.

ಶ್ರೀ ಎಂ. ಸಿ. ನಾಣಯ್ಯ:- ಅಬಕಾರಿ ನಿರೀಕ್ಷಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ದಿನಾಂಕ 23-11-96ರಂದು ಸಾರ್ವಜನಿಕರು ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿರುವುದಿಲ್ಲ. ಸದರಿ ಸ್ಥಳವು ನಿಯಮ ಐದರ ವ್ಯಾಪ್ತಿಯೊಳಗೆ ಆಕ್ಷೇಪಣಾ ರಹಿತವಾಗಿದೆ. ಕೆಲವು ಹಿತಾಸಕ್ತಿಗಳು ಬರೆದ ದೂರು ಅರ್ಜಿಗಳನ್ನು ಕೂಲಂಕಷವಾಗಿ ವಿಚಾರ ನಡೆಸಿದ ನಂತರ ನಿರೀಕ್ಷರು ದೂರುಗಳು ದುರುದ್ದೇಶಪೂರಿತವಾಗಿವೆ ಎಂದು ತಿಳಿಸಿ ಹುರುಳಿಲ್ಲದ ವಿಚಾರ ಎಂದು ತಿಳಿಸಿದ ನಂತರ ಸದರಿ ಸ್ಥಳಕ್ಕೆ ಅನುಮತಿ ನೀಡಬಹುದೆಂದು ತಿಳಿಸಿರುತ್ತಾರೆ. ನನ್ನದು ಮಂಜೂರಾದನಂತರ ಲೋಕಸಭಾ ಸದಸ್ಯರು ಮತ್ತು ಶಾಸಕರು ದೂರವಾಣಿ ಕರೆಗಳಲ್ಲಿ ಸದರಿ ಸಿ.ಎಲ್. 2 ಸನ್ನದಿನ ಬಗ್ಗೆ ಮತ್ತೊಮ್ಮೆ ಕೂಲಂಕಷವಾಗಿ ಚರ್ಚಿಸಲು ಹಾಗೂ ತನಿಖೆ ಮಾಡಲು ತಿಳಿಸಿರುವುದರಿಂದ ಇದರ ಬಗ್ಗೆ ಮಾತ್ತೊಮ್ಮೆ ಸದರಿ ಸಿ.ಎಲ್. ಸನ್ನದು ಸ್ಥಳಕ್ಕೆ ಭೇಟಿ ನೀಡಿ ಕೂಲಂಕಷವಾಗಿ ಪರಿಶೀಲಿಸಿ ಒಂದು ಅಂತಿಮ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಆದೇಶಿಸಿ

ಮತ್ತು ಅಲ್ಲಿಯವರೆಗೆ ತಾತ್ಕಾಲಿಕವಾಗಿ ಸನ್ನದನ್ನು ಮುಚ್ಚಿಸಲು ಅಬಕಾರಿ ನಿರೀಕ್ಷಕರು ಬಿನ್ನಿಪೇಟೆ ವಲಯ ಬೆಂಗಳೂರು ಅವರಿಗೆ ಆದೇಶಿಸಲಾಯಿತು. ಈಗಲೂ ಸಹ ಮದ್ಯದ ಅಂಗಡಿ ಮುಚ್ಚಿರುತ್ತದೆ. ಈ ಬಗ್ಗೆ ಇದ್ದ ವಿಷಯವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸುಸ್ತೇನೆ. ಅವರು ಹೇಳಿರುವುದು ಅವರ ಆ ದೂರಿನ ಮೇಲೆ ವಿಚಾರ ನಡೆಯಿಸಿ ವರದಿಯನ್ನು ಕಳುಹಿಸಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ವರದಿಯನ್ನು ನಾವು ಕಳುಹಿಸುತ್ತಾ ಇದ್ದೇವೆ. ಅಲ್ಲಿಯವರೆಗೆ ಇದನ್ನು ಮುಚ್ಚಿಸಲಾಗಿದೆ. ಅಂದರೆ ಅವರ ಮೇಲೆ ಯಾವ ಆಕ್ಷೇಪಣೆಯನ್ನು ಮಾಡಿಲ್ಲ ಮಾನ್ಯ ಸಭಾಧ್ಯಕ್ಷರೇ, ತಾವು ದಯವಿಟ್ಟು ಇದನ್ನು ಓದಿ.

ಶ್ರೀ ಪಿ. ಎಸ್. ಪ್ರಕಾಶ್:- ಸರ್, ಜನರ ವಿರೋಧ ಇಲ್ಲ ನಾವೇ ವಿರೋಧ ಇರುವುದು. ಆದ್ದರಿಂದ ಮುಚ್ಚಿರುವುದು ಎಂದು ನಮ್ಮ ಮೇಲೆ. ಕೋರ್ಟಿಗೆ ಹಾಕಿದ್ದಾರೆ. ಇದು ಕೋರ್ಟಿಗೆ ಕೊಟ್ಟಿರತಕ್ಕಂಥ ದಾಖಲೆ ಅವರ ಸಮನಾಗಿ ಇದರಲ್ಲಿ ವ್ಯಾಪಕವಾದ ಭ್ರಷ್ಟಾಚಾರ ಆಗಿ ಇಲ್ಲಿ ಯಾರೂ ವಿರೋಧವಿಲ್ಲ ನಾವೇ ವಿರೋಧ ಮಾಡೋದು ಎಂದು ಈ ರೀತಿಯಾಗಿ 7-2-97ರಂದು ಅವರು ಪತ್ರ ಕೊಟ್ಟಿದ್ದಾರೆ, ಕೋರ್ಟಿನಲ್ಲಿ ದಾವೆ ಹಾಕಿದ ಮೇಲೆ. ಅಂದರೆ ಎಕ್ಸೈಜ್ ಇಲಾಖೆಯದ್ದೂ ಕೂಡ ಒಂದೇ ರೀತಿ ಉತ್ತರ ಇರುತ್ತದೆ. ಮತ್ತು ಮಾಲೀಕರೂ ಒಂದೇ ರೀತಿಯಾದ ದಾವೆ ನಮ್ಮ ಮೇಲೆ ಹಾಕಿರುವುದರಿಂದ ಇಲ್ಲಿ ಎಕ್ಸೈಜ್ ಸೂಪರಿಂಟೆಂಡೆಂಟ್ ವ್ಯಾಪಕವಾದ ಭ್ರಷ್ಟಾಚಾರ ಮಾಡಿ ಅವರ ಜೊತೆ ಶಾಮೀಲಾಗಿದ್ದಾರೆ. ಇದು ಮತ್ತೆ ಕೋರ್ಟಿನಲ್ಲಿ ಕೊಟ್ಟಿರುವುದರಿಂದ ನಾಳೆ ಕೋರ್ಟಿನಲ್ಲಿ ಅದೇಶವಾಗುತ್ತದೆ ಬಾರುತೆಗೆಯಬಹುದೆಂದು. ಆಗ ನಮ್ಮ ಗತಿ ಏನು? ಹೊಸದಾಗಿ ಆಯ್ಕೆಯಾಗಿ ಬಂದ ಶಾಸಕರು ನಾವು ಈ ರೀತಿ ಯಾದರೆ ನಾವು ಹೇಗೆ ಕೆಲಸ ಮಾಡುವುದು? ಜನ ನಮ್ಮನ್ನು ಸುಮ್ಮನೆ ಬಿಡುತ್ತಾರಾ?

MR SPEAKER:- I am satisfied. I revise my stand; we are not on line to punish anybody unneressarily. It is not our disire.ಯೋಗೇಶ ಭಟ್ಟರವರು ಬೀಡಿ ಕಾರ್ಮಿಕರ ಬಗ್ಗೆ ತಾವು ಹೇಳಿ. ಬೇಗ ಮುಗಿಸಿ ತಾವು ಆ ಮೇಲೆ ನನ್ನ ಕಛೇರಿಗೆ ಬನ್ನಿ ಪ್ರಕಾಶ ಅವರೆ.

ಶ್ರೀ ಎನ್. ಯೋಗೇಶ್ ಭಟ್:- ದೇಶದಲ್ಲಿರುವ 65ಲಕ್ಷ ಬೀಡಿ ಕಾರ್ಮಿಕರಲ್ಲಿ 10 ಲಕ್ಷ ಬೀಡಿ ಕಾರ್ಮಿಕರು ಕರ್ನಾಟಕಕ ರಾಜ್ಯದಲ್ಲಿ ಇದ್ದಾರೆ, ಅದರಲ್ಲಿ ಐದು ಲಕ್ಷ ಜನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದಾರೆ. ಇಂಥ ಸನ್ನಿವೇಶದಲ್ಲಿ ಇವತ್ತು ಒಂದು ಗಂಭೀರವಾದ ಒಂದು ಅಪಾಯ ಮುಂದೆ ಬರುತ್ತಾ ಇದೆ. ಈ ಮಿನಿ ಸೀಗಾರೇಟ್ 60 ಎಮ.ಎಮ್. ಗಿಂತ ಕಡಿಮೆ ಇರುವ ಮಿನಿ ಸೀಗಾರೇಟ್‌ಗಳು ಇರುವುದನ್ನು ಇವತ್ತು ಕೇಂದ್ರಸರ್ಕಾರದವರು ರೇಟನ್ನು ಸುಮಾರು 285ರಿಂದ 75ಕ್ಕೆ ಇಳಿಸಿದ್ದರಿಂದ ಇವತ್ತು ಗಂಭೀರ ಅಪಾಯ ಬಂದಿದೆ. ಆದ್ದರಿಂದ ಇದನ್ನು ತಪ್ಪಿಸಲು ಸರ್ಕಾರಕ್ಕೆ ವಿಶೇಷ ವಿನಂತಿ ಮಾಡಿಕೊಳ್ಳುತ್ತೇನೆ. ಈ 10 ಲಕ್ಷ ಕಾರ್ಮಿಕರ ಹಿತಾಸಕ್ತಿಯನ್ನೂ ಕಾಪಾಡುವ ರೀತಿಯಲ್ಲಿ ಕನಿಷ್ಠ ಕರ್ನಾಟಕ ರಾಜ್ಯದಲ್ಲಾದರೂ ಮಿನಿ ಸಿಗರೇಟ್ ಉತ್ಪಾದನೆ ಹಾಗೂ ಮಾರಾಟವನ್ನು ಬ್ಯಾನ್ ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಚಿಸುತ್ತೇನೆ.